ಸೂಕ್ಷ್ಮ ಉಲ್ಕೆಗಳು (ಮೀಟಿಯೊರಾಯ್ಡ್ಸ್) ಯಥೇಚ್ಛವಾಗಿ ಕಂಡುಬರುವ, ಉಷ್ಣತೆಯ ವೈಪರೀತ್ಯಗಳನ್ನು ಉಳ್ಳ ಭಯಂಕರ ಅಂತರಿಕ್ಷ ಪರಿಸರವನ್ನು ಮನುಷ್ಯ ತಾಳಿಕೊಳ್ಳಬಲ್ಲನೇ? ಈ ಪ್ರಶ್ನೆಗಳಿಗೆ ಉತ್ತರ ಸುಲಭದ್ದಾಗಿರಲಿಲ್ಲ. ಸಂದೇಹಗಳನ್ನು ಪರಿಹರಿಸಿಕೊಳ್ಳಲು, ನಾಯಿ, ಚಿಂಪಾಂಜಿ, ಕೋತಿಗಳನ್ನು ಭೂಕಕ್ಷೆಗೆ ಉಡಾಯಿಸಿ, ಅಲ್ಲಿ ಅವುಗಳ ದೇಹಸ್ಥಿತಿಯನ್ನು ಕೂಲಂಕಷವಾಗಿ ಪರಿಶೀಲಿಸಿ ಅಪಾಯವಿಲ್ಲದಿರುವುದನ್ನು ಖಚಿತಪಡಿಸಿಕೊಳ್ಳಲಾಯಿತು.

ಗಗಾರಿನ್ ಅಂತರಿಕ್ಷಯಾನ ಕೈಗೊಳ್ಳುವ ವೇಳೆಗಾಗಲೇ ಅಂದಿನ 'ಶೀತಲ ಸಮರ'ದಲ್ಲಿ (ಕೋಲ್ಡ್ ವಾರ್) ಸೆಣಸಾಡುತ್ತಿದ್ದ ಅಮೆರಿಕ ಹಾಗೂ ಸೋವಿಯತ್ ರಷ್ಯಾಗಳ ನಡುವೆ 'ಅಂತರಿಕ್ಷ ಸ್ಪರ್ಧೆ' ಏರ್ಪಟ್ಟಿತ್ತು. ಗಗಾರಿನ್‌ನ ಯಾನ ಅಮೆರಿಕದ ಪ್ರತಿಷ್ಠೆಗೆ ಬಲವಾದ ಪೆಟ್ಟು ಕೊಟ್ಟಿತು. ಅದಾದ ಒಂದು ತಿಂಗಳೊಳಗೇ ಅಮೆರಿಕದ ಮೊದಲ ಗಗನಯಾತ್ರಿ ಅಲನ್ ಷಪರ್ಡ್ ಅಂತರಿಕ್ಷವನ್ನು ಸ್ಪರ್ಶಿಸಿ ಬಂದ. ಕೆಲವು ದಿನಗಳಲ್ಲೇ ಅಮೆರಿಕದ ಅಂದಿನ ಅಧ್ಯಕ್ಷ ಜಾನ್ ಎಫ್ ಕೆನಡಿ, 'ಈ ದಶಕದ ಅಂತ್ಯದ ಒಳಗೆ ಮಾನವನೊಬ್ಬನನ್ನು ಚಂದ್ರನ ಮೇಲಿಳಿಸಿ ನಂತರ ಭೂಮಿಗೆ ಸುರಕ್ಷಿತವಾಗಿ ಕರೆಸಿಕೊಳ್ಳುವುದೇ ದೇಶದ ಗುರಿ' ಎಂದು 1962ರ ಮೇ ತಿಂಗಳಲ್ಲಿ ಘೋಷಿಸಿದರು.

## ಚಂದ ಸ್ಪರ್ಧೆ 'ಚಂದ್ರ ಸ್ಪರ್ಧೆ'

ಬಾಹ್ಯಾಕಾಶ ಕ್ಷೇತ್ರದಲ್ಲಿನ ಅಮೆರಿಕ ಹಾಗೂ ಸೋವಿಯತ್ ರಷ್ಯಾಗಳ ಪೈಪೋಟಿ 'ಚಂದ್ರ ಸ್ಪರ್ಧೆ'ಗೆ ಎಡೆಮಾಡಿಕೊಟ್ಟಿತು. ಜೊತೆಗೇ ಮಾನವಸಹಿತ ಅಂತರಿಕ್ಷಯಾನದ ಮಹತ್ತರವಾದ ಮುನ್ನಡೆಗೂ ಕಾರಣವಾಯಿತು.

ಅರವತ್ತರ ದಶಕದ ಪೂರ್ವಾರ್ಧದಲ್ಲಿ ರಷ್ಯಾ ಮಾನವಸಹಿತ ಅಂತರಿಕ್ಷಯಾನದಲ್ಲಿ ಒಂದಾದ ಮೇಲೊಂದರಂತೆ ದಾಖಲೆಗಳನ್ನು ಸ್ಥಾಪಿಸಿತು. 1963ರಲ್ಲಿ ಆ ದೇಶದ ವ್ಯಾಲಂಟೀನಾ




ವ್ಯಾಲಂತೀನಾ ತೆರೆಸ್ಕೋವಾ ಚಿತ್ರ ಕೃಪೆ ನಾಸಾ




ಉಡಾವಣಾ ವೇದಿಕೆಯ ಮೇಲೇ ಮೂವರು ಗಗನಯಾತ್ರಿಗಳನ್ನು ಬಲಿತೆಗೆದುಕೊಂಡ ಅಪಾಲೋ 1 ನೌಕೆ
ಚಿತ್ರ ಕೃಪೆ ನಾಸಾ

ತೆರೆಸ್ಕೋವಾ ಅಂತರಿಕ್ಷಕ್ಕೆ ತೆರಳಿದ ಮೊದಲ ಮಹಿಳೆ ಎನ್ನಿಸಿಕೊಂಡರೆ, 1965ರಲ್ಲಿ ಸೋವಿಯತ್ ಗಗನಯಾತ್ರಿ ಅಲೆಕ್ಸೆ ಲಿಯೋನೋವ್ ಅಂತರಿಕ್ಷದಲ್ಲಿ ನಡೆದ ಮೊದಲ ಮಾನವನೆಂದು ಖ್ಯಾತನಾದ. 'ನಡೆದ' ಎನ್ನುವುದಕ್ಕಿಂತ ತೇಲಾಡಿದ ಎನ್ನುವುದು ಹೆಚ್ಚು ಸಮಂಜಸ. ಏಕೆಂದರೆ ಭೂಕಕ್ಷೆಯಲ್ಲಿ ತೂಕರಹಿತ ಸ್ಥಿತಿಯನ್ನು ಅನುಭವಿಸುತ್ತಾ ತೇಲಾಡುತ್ತಿರುವ ಗಗನಯಾತ್ರಿಗೆ ನಡೆಯಲು ಅಂತರಿಕ್ಷದಲ್ಲಿ ನೆಲವಾದರೂ ಎಲ್ಲಿದೆ?.

ಇದಾದ ನಂತರ ಅಮೆರಿಕ ಮಾನವಸಹಿತ ಅಂತರಿಕ್ಷಯಾನದಲ್ಲಿ ಮೇಲುಗೈ ಸಾಧಿಸಲಾರಂಭಿಸಿತು. ಚಂದ್ರಯಾನಕ್ಕೆ ಅಗತ್ಯವಾದ ಸಿದ್ಧತೆಗಳನ್ನು ಕ್ರಮಬದ್ಧವಾಗಿ ಮಾಡಿಕೊಳ್ಳಲಾರಂಭಿಸಿದ ಫಲವಿದು. ಚಂದ್ರಯಾನಕ್ಕೆ ಅಗತ್ಯವಾದ ತನ್ನ 'ಅಪಾಲೋ' ನೌಕೆಯನ್ನು, ಅದಕ್ಕಿಂತ ಮಿಗಿಲಾಗಿ ಮೂರು ಜನ ಗಗನಯಾತ್ರಿಗಳು ಉಳ್ಳ ಆ ನೌಕೆಯನ್ನು ಭೂಮಿಯಿಂದ ಉಡಾಯಿಸುವ ರಕ್ಕಸ 'ಸ್ಯಾಟರ್ನ್–5' ರಾಕೆಟ್ಟನ್ನು ಸಿದ್ಧಗೊಳಿಸಿತು. ಆದರೆ ಆ ನಡುವೆ 'ಅಪಾಲೋ' ನೌಕೆಯನ್ನು

